ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**8/2020**

ದಿನಾಂಕ **31.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಡಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಪಿ.ಎನ್ ವಕೀಲರಿಂದಃ

ನಿಡಿ-14 ಆಗುವ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದೆ. ಆ ಸಮಯದಲ್ಲಿ ಡಿ.ಸರಸ್ವತಮ್ಮ ಮತ್ತು ರಾಧಕೃಷ್ಣರೆಡ್ಡಿ, ನರೇಶ್, ಪ್ರಪುಲ್ಲ ಇವರು ಎತ್ತಿನಹಳ್ಳಿಯಲ್ಲಿ ವಾಸವಿದ್ದರು, ಈಗ ಅವರು ಪಾವಗಡ ಟೌನ್ ನಲ್ಲಿ ವಾಸವಿದ್ದಾರೆ. ನಿಡಿ-14 ರ ದಾಖಲೆಯಂತೆ ಜಾಗವನ್ನು ಅಳತೆ ಮಾಡಿಸಿದ್ದೇನೆ. ಸದರಿ ಅಳತೆ ಮಾಡಿಸಿದ ಸರ್ವೆ ದಾಖಲೆಗಳು ನನ್ನ ಬಳಿ ಇಲ್ಲ, ಆದರೆ ಅರ್ಜಿ ಸಲ್ಲಿಸಿದ ಬಗ್ಗೆ ಅರ್ಜಿ ಇದೆ. ನಿಡಿ-14 ರ ಪಶ್ಚಿಮಕ್ಕೆ ನನಗೆ ಸೇರಿದ ಜಾಗ ಇದೆ. ಸದರಿ ಪಶ್ಚಿಮಕ್ಕೆ ಇರುವ ಜಾಗ ನಿಡಿ-14 ರಲ್ಲೆ ನಮೂದಾಗಿದೆ. ಮೊದಲು ರಾಧಾಕೃಷ್ಣರವರಿಗೆ ಸೇರಿತ್ತು. ಅವರ ಜಾಗದ ನಂತರ ಬೇರೆ ಯವರಿಗೆ ಸೇರಿದ ಎತ್ತಿನಹಳ್ಳಿ ಗ್ರಾಮಸ್ಥರ ಮನೆಗಳು ಇದೆ. ಅವರ ಹೆಸರುಗಳು ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಪ್ರತಿವಾದಿಯ ಮನೆ ಮತ್ತು ಜಮೀನು ಇದೆ ಎಂದರೆ ಸರಿಯಲ್ಲ. ನಿಡಿ-14 ರ ಜಮೀನಿನ ಪಶ್ಚಿಮಕ್ಕೆ ಪ್ರತಿವಾದಿಯ ಜಮೀನು ಇದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ